**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.1009/2021**

**CW- 25** **PW:3**

ಸಾಕ್ಷಿಯ ಹೆಸರು ಃ ಪ್ರಕಾಶ ರಾಠೋಡ
ತಂದೆ /ಗಂಡನ ಹೆಸರು ಃ ಮೊತಿಲಾಲ
ವಯಸ್ಸು ಃ 42 ವರ್ಷ
ಉದ್ಯೋಗ ಃ ಪಿ ಐ ಖಾನಾಪುರ ಪಿ ಟಿ ಎಸ್
ವಾಸಸ್ಥಳ ಃ ಖಾನಾಪುರ

ದಿಃ **21.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ

02-12-2012 ರಿಂದ 02-07-2015 ರವರೆಗೆ ನವನಗರ ಪೊ. ಠಾ ಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 30-05-2013 ರಂದು ಬೆಳಿಗ್ಗೆ 11 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಈ ಪ್ರಕರಣದ ಚಾಸಾ 1 ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು ಆ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದು ಈಗಾಗಲೇ ನಿಪಿ.1 ಅಂತಾ ಗುರುತಿಸಲಾಗಿದೆ. ಆ ದೂರಿನ ಆಧಾರದ ಮೇಲೆ ಠಾಣಾ ಮೊಕ್ಕದ್ದಮೆ 93/13 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರವವ ಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ಪ್ರವವ ಯನ್ನು ನಿಪಿ-3 ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳದಲ್ಲಿ ಚಾಸಾ-1 ರವರ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮದಾಹ್ಯ 1 ರಿಂದ 2 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ 17 ರಿಂದ 22 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷದಾರಗಳು ಇದ್ದ ಕಾರಣ ದಿಃ 11-01-2014 ರಂದು ದೋಷಾರೋಪಣ ಪಟ್ಟಿಯನ್ನ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ತಲೆಮರಿಸಿಕೊಂಡಿದ್ದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.